







## ತಾರೆಯರ ಪರಿಸರ ಪ್ರೀತಿ

ಸಿನಿಮಾ ತಾರೆಯರು ಮಾಡಿದ್ದೆಲ್ಲವೂ ಯುವ ಮನಗಳಿಗೆ ಆದರ್ಶ. ಅವರು ತೊಡುವ ವಿಧವಿಧವಾದ ಬಟ್ಟೆ, ಅವರು ಮಾಡಿಕೊಳ್ಳುವ ಮೇಕಪ್, ತಿನ್ನುವ ಆಹಾರ ಎಲ್ಲವೂ ಟ್ರೆಂಡ್ ಆಗಿ ಮಾರ್ಪಡುವ ಕಾಲವಿದು. ಈ ಹಿನ್ನೆಲೆಯಲ್ಲಿ ಅನೇಕ ಜನಪ್ರಿಯ ತಾರೆಯರು ಪರಿಸರಸ್ನೇಹಿ ಫ್ಯಾಷನ್ ಬಟ್ಟೆಗಳ ಧಾರಣೆಯನ್ನು ಉತ್ತೇಜಿಸುತ್ತಿದ್ದಾರೆ. ಖಾದಿ, ಕಾಟನ್‌ನಂಥ ಪರಿಸರಸ್ನೇಹಿ ಬಟ್ಟೆಗಳ ಪ್ರಚಾರದ ರಾಯಭಾರಿಯಾಗುತ್ತಾ ಫ್ಯಾಷನ್ ಪ್ರಿಯ ಮನಸ್ಸುಗಳನ್ನು ಆರ್ಗ್ಯಾನಿಕ್ ಕ್ಲೋಥಿಂಗ್ ಕಡೆ ಸೆಳೆಯುತ್ತಿದ್ದಾರೆ.

ಇತ್ತೀಚೆಗೆ 'ಚರಕ' ಸಂಸ್ಥೆಯ ಸ್ಥಾಪಕ ಪ್ರಸನ್ನ, ದೇಸೀ ಉತ್ಪನ್ನಗಳ ಉತ್ತೇಜನಕ್ಕಾಗಿ ನಡೆಸಿದ ಸತ್ಯಾಗ್ರಹವನ್ನು ಬಾಲಿವುಡ್ ನಟ ಇರ್ಫಾನ್ ಖಾನ್ ಬೆಂಬಲಿಸಿದ್ದನ್ನು ನೆನಪಿಸಿಕೊಳ್ಳಬಹುದು.

ಬಾಲಿವುಡ್ ಅಂಗಳದಲ್ಲಿ ತಮ್ಮ ಚೆಲುವಿನಿಂದ ಮನೆಮಾತಾಗಿರುವ ಕತ್ರಿನಾ ಕೈಫ್ ಕೂಡ ಪರಿಸರಸ್ನೇಹಿ ಫ್ಯಾಷನ್ ಬೆಂಬಲಿಗರು. 2017ರಲ್ಲಿ ಅವರು ನಟಿಸಿರುವ 'ಜಗ್ಗಾ ಜಾಸೂಸ್' ಚಿತ್ರದಲ್ಲಿ ಕತ್ರಿನಾ ಸಂಪೂರ್ಣವಾಗಿ ತೊಟ್ಟಿದ್ದು ಲಾಸ್ ಏಂಜಲೀಸ್‌ನ 'ದ ರಿಫಾರ್ಮೇಶನ್' ಬ್ರ್ಯಾಂಡ್‌ನ ಬಟ್ಟೆಗಳನ್ನು. ಪುನರ್‌ಬಳಕೆ ಹಾಗೂ ಸಾವಯುವ ವಿಧಾನದಲ್ಲಿ ಬಟ್ಟೆಯನ್ನು ಉತ್ಪಾದಿಸುತ್ತದೆ ಈ ಕಂಪನಿ. ಅನೇಕ ಫ್ಯಾಷನ್ ಶೋಗಳಲ್ಲಿಯೂ ಪರಿಸರಸ್ನೇಹಿ ಬ್ರ್ಯಾಂಡ್‌ಗಳ ದಿರಿಸು ತೊಟ್ಟು ರ್‍ಯಾಂಪ್‌ವಾಕ್ ಮಾಡಿದ್ದಾರೆ ಕತ್ರಿನಾ.

ಟ್ರೆಂಡ್ ಸೆಟ್ಟರ್ ಎಂದೇ ಕರೆಸಿಕೊಳ್ಳುವ ತಾಪ್ಸಿ ಪನ್ನು ಕೂಡ ಪರಿಸರಸ್ನೇಹಿ ದಿರಿಸುಗಳನ್ನೇ ಹೆಚ್ಚಾಗಿ ಧರಿಸುತ್ತಾರೆ. ನಟಿ ರಿಚಾ ಛಡ್ಡಾ ಕೂಡ ಪರಿಸರಸ್ನೇಹಿ ಜೀವನ ಶೈಲಿಯನ್ನು ಅಳವಡಿಸಿಕೊಂಡವರು.

ಗುಲ್ ಪನಾಗ್, ದಿಯಾ ಮಿರ್ಜಾ, ಯಾಮಿ ಗೌತಮ್ ಹೀಗೆ ಬಾಲಿವುಡ್‌ನ ಹಲವು ತರಲೆಯರು ಕೂಡ ಪರಿಸರ ಸ್ನೇಹಿ ಫ್ಯಾಷನ್ ಅನ್ನು ಬೆಂಬಲಿಸುತ್ತಾ ಬಂದಿದ್ದಾರೆ.

ಪರಿಸರಸ್ನೇಹಿ ಪ್ರವರ್ತಕರಲ್ಲಿ ಹಾಲಿವುಡ್‌ನ ಎಮ್ಮಾ ವ್ಯಾಟ್ಸನ್ ಅವರದ್ದು ಮುಂಚೂಣಿಯಲ್ಲಿರುವ ಹೆಸರು. 'ಫೀಡ್ ಗುಡ್ ಸ್ಟೈಲ್' ಎನ್ನುವ ಸೈಟ್ ಒಂದರ ಸಹ ಸಂಸ್ಥಾಪಕಿಯೂ ಆಗಿರುವ ಅವರು ನಿರಂತರವಾಗಿ ಸಾವಯುವ ಹಾಗೂ ಪರಿಸರಸ್ನೇಹಿ ಫ್ಯಾಷನ್ ಅನ್ನು ಉತ್ತೇಜಿಸುತ್ತಲೇ ಬಂದಿದ್ದಾರೆ. ಹಾಲಿವುಡ್ ಬೆಡಗಿಯರ ನೆಚ್ಚಿನ ವಸ್ತ್ರ ವಿನ್ಯಾಸಕಿ ಆಗಿರುವ ಸ್ಟೆಲ್ಲೆ ಮೆಕಾರ್ಟ್ನಿ ಕೂಡ ಪರಿಸರಸ್ನೇಹಿ ವಿನ್ಯಾಸಕಿ ಎಂದೇ ಖ್ಯಾತಿ ಪಡೆದವರು. ಕ್ರೌರ್ಯಮುಕ್ತ ಫ್ಯಾಷನ್ ಹಾಗೂ ಪರಿಸರಕ್ಕೆ ಪೂರಕವಾದ ಫ್ಯಾಷನ್ ಅವರ ಮೂಲಮಂತ್ರ.